ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2023–24/ ಎಸ್ಸ್ . 127 ದಿನಾಂಕ: 08 JAN 2024

## ಸಭೆಯ ನಡಾವಳಿಗಳು

ದಿನಾಂಕ:12.12.2023 ಮಂಗಳವಾರ ದಂದು ಬೇಗೂರು ಉಪವಿಭಾಗದ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ, ಚಾಮರಾಜನಗರ–ಕೊಡಗು ರವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:–**

1. ಶ್ರೀ ಸೋಮಶೇಖರ್ : ಅ.ಇಂ(ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಚಾ.ನಗರ–ಕೊಡಗು
2. ಶ್ರೀ ರಾಮಚಂದ್ರ ರಾವ್. ಜಿ : ಸ'ಕಾ.ಇಂ(ವಿ), ಕಾ ಮತ್ತು ಪಾ ಉಪ ವಿಭಾಗ, ಬೇಗೂರು
3. ಶ್ರೀ ಅವಿನಾಶ್ ಜಿ ಎಂ : ಸ.ಇಂ(ತಾ), ಕಾ ಮತ್ತು ಪಾ ಉಪ ವಿಭಾಗ, ಬೇಗೂರು
4. ಶ್ರೀ ಆನಂದ್ ಎಸ್.ಎನ್ : ಹಿರಿಯ ಸಹಾಯಕ, ಬೇಗೂರು
5. ಶ್ರೀ ಜ್ಞಾನಪ್ರಕಾಶ್ ಎ.ಜಿ : ಕಿ.ಇಂ(ವಿ), ಕಾ ಮತ್ತು ಪಾ ಶಾಖೆ, ಕಬ್ಬಹಳ್ಳಿ
6. ಶ್ರೀ ರಾಮಚಂದ್ರಯ್ಯ. ಸಿ.ಕೆ : ಪ್ರಭಾರ ಕಿ.ಇಂ(ವಿ), ಕಾ ಮತ್ತು ಪಾ ಶಾಖೆ, ಬೇಗೂರು

ಅದೀಕ್ಷಕಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನ ಸಂಪರ್ಕ ಸಭೆ ಕರೆದು ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ರವಿ, ಸುರೇಶ್, ಮಹದೇವಶೆಟ್ಟಿ ಮತ್ತು ಶಿವಯ್ಯ, ಬೇಗೂರು ಗ್ರಾಮ | *. ಬೇಗೂರು ಗ್ರಾಮದ ಲಿಟಲ್ ಫ್ಲವರ್ ಶಾಲೆಯ ಹಿಂಬಾಗವಿರುವ 11 ಕೆವಿ ಇಂಡಸ್ಟ್ರಿಯಲ್ ಮಾರ್ಗವು ರಸ್ತೆಯ ಮಧ್ಯ ಬಾಗದಲ್ಲಿದ್ದು ಪಕ್ಕಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ.<br>*. ಬೇಗೂರು ಗ್ರಾಮದಲ್ಲಿರುವ ನಿಷ್ಕ್ರಿಯ ಕಂಬಗಳನ್ನು ತೆಗೆದುಹಾಕಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ವಿಷಯದ ಬಗ್ಗೆ ಕಿರಿಯ ಇಂಜಿನಿಯರ್(ವಿ), ಬೇಗೂರು ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. |
| 2 | ಮಹದೇವಸ್ವಾಮಿ, ಶಿವಮೂರ್ತಿ, ರಾಜಣ್ಣ, ಸಂತೋಷ್ ಹೆಚ್.ಸಿ ಮತ್ತು ನಂಜಪ್ಪ, ಹಕ್ಕಲಪುರ ಗ್ರಾಮ | * ಹಕ್ಕಪುರ ಗ್ರಾಮದ ರಸ್ತೆಯ ಬದಿ (ಮನೆಯ ಮುಂಬಾಗ) ಇರುವ ಪರಿವರ್ತಕವನ್ನು ಪಕ್ಕಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ವಿಷಯದ ಬಗ್ಗೆ ಕಿರಿಯ ಇಂಜಿನಿಯರ್(ವಿ), ಬೇಗೂರು ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಬೇಗೂರು ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.